ಒಬ್ಬ ಸ್ತ್ರೀ ಟ್ರಾಫಿಕ್ ಸಿಗ್ನಲ್ ಉಲ್ಲಂಘಿಸಿದಳು. ಟ್ರಾಫಿಕ್ ಪೊಲೀಸ್ ಅವಳನ್ನು ಹಿಡಿದು ನಿಲ್ಲಿಸಿದ. 'ದಯವಿಟ್ಟು ನನಗೆ ಹೋಗಲು ಅವಕಾಶ ಕೊಡು ನಾನೊಬ್ಬ ಟೀಚರ್' ಎಂದಳಾಕೆ. ಆಗ ಟ್ರಾಫಿಕ್ ಪೊಲೀಸ್ 'ಮೇಡಂ ಈ ಅವಕಾಶಕ್ಕಾಗಿ ನಾನು ತುಂಬಾ ದಿನಗಳಿಂದ ಕಾಯುತ್ತಿದ್ದೆ. ನಿಮಗೆ ಹೋಗಲು ಅವಕಾಶ ನೀಡುತ್ತೇನೆ. ಆದರೆ ಅದಕ್ಕೆ ಮೊದಲು ನಾನು ಟ್ರಾಫಿಕ್ ಸಿಗ್ನಲ್ ಉಲ್ಲಂಘಿಸುವುದಿಲ್ಲ ಎಂದು ನೂರು ಬಾರಿ ಬರೆಯಿರಿ ಎಂದ.

★★★

ಒಂದು ಹುಲಿ ಒಬ್ಬ ಮುದುಕನನ್ನು ಹಿಡಿದುಕೊಂಡಿತು. ಆಗ ಆ ಮುದುಕ ಹುಲಿಯನ್ನು ಕುರಿತು ನಾನು ಮುದುಕನಾಗಿದ್ದೇನೆ. ನನ್ನ ರಕ್ತ ತಂಪಾಗಿದೆ. ನೀನು ಯಾವುದಾದರೂ ತರುಣನನ್ನು ಹಿಡಿದು ಅವನ ಬಿಸಿ ರಕ್ತವನ್ನು ಕುಡಿಯಬಾರದೆ ಎಂದ.

ಹುಲಿ ಹೇಳಿತು; ಇವತ್ತು ತುಂಬ ಬಿಸಿಲಿದೆ ನನ್ನ ಮನಸ್ಸು ಕೋಲ್ಡ್ ಡ್ರಿಂಕ್ ಕುಡಿಯಲು ಬಯಸುತ್ತಿದೆ!

★★★

ಜೀವಾವಧಿ ಶಿಕ್ಷೆ ಹೊಂದಿದ ಒಬ್ಬ ಕೈದಿ 8 ವರ್ಷಗಳ ನಂತರ ಜೈಲಿನಿಂದ ಪರಾರಿಯಾಗುವುದರಲ್ಲಿ ಯಶಸ್ವಿಯಾದ. ಅಲ್ಲಿ ಇಲ್ಲಿ ಅಡಗಿಕೊಳ್ಳುತ್ತ, ಪೊಲೀಸರ ಕಣ್ಣಿನಿಂದ ತಪ್ಪಿಸಿಕೊಳ್ಳುತ್ತ, ತನ್ನ ಮನೆಗೆ ಬಂದು ಕಾಲ್‌ಬೆಲ್ ಒತ್ತಿದ. ಬಾಗಿಲು ತೆರೆದ ಪತ್ನಿ ಎದುರಿಗೆ ತನ್ನ ಪತ್ನಿಯನ್ನು ಕಂಡು 'ನೀವು ಜೈಲಿನಿಂದ ಪರಾರಿಯಾಗಿ ಎಂಟು ಗಂಟೆ ಕಳೆದಿದೆ ಎಂದು ಟಿ.ವಿಯಲ್ಲಿ ವಾರ್ತೆ ಬರುತ್ತಿದೆ. ಎಲ್ಲಿದ್ದೀರಿ ಇಷ್ಟೊತ್ತು? ಎಂದು ಕೇಳಿದಳು.

ಕೈದಿ ಮತ್ತೆ ಜೈಲಿನ ಕಡೆಗೆ ಓಡಿದ. ಶರಣಾಗಲು!

★★★

ಅಧ್ಯಾಪಕ: ಗೋಪಿ ನೀನು ಎಲ್ಲಿ ಹುಟ್ಟಿರುವೆ?

ಗೋಪಿ: ಸರ್, ನಾನು ತಿರುವನಂತಪುರದಲ್ಲಿ ಹುಟ್ಟಿರುವೆ.

ಅಧ್ಯಾಪಕ: ಹಾಗಾದರೆ ತಿರುವನಂತಪುರ ಸ್ಪೆಲ್ಲಿಂಗ್ ಹೇಳು.

ಗೋಪಿ: (ತುಂಬ ಹೊತ್ತು ಯೋಚಿಸಿ); ಇಲ್ಲ ಸರ್ ನಾನು ತಪ್ಪಾಗಿ ಹೇಳಿದ್ದೇನೆ. ನಾನು ಆಗ್ರಾದಲ್ಲಿ ಹುಟ್ಟಿದ್ದೇನೆ.

★★★




ಪತ್ನಿ: ನಾನು ತವರಿಗೆ ಹೊರಟಿದ್ದೇನೆ.

ಪತಿ: ಸರಿ, ನಾನು ಬಾಬಾರ ಬಳಿಗೆ ಹೋಗುತ್ತೇನೆ.

ಪತ್ನಿ: ಏಕೆ, ನನ್ನನ್ನು ಹಿಂದಕ್ಕೆ ಕರೆದುಕೊಂಡು ಬರುವ ಉಪಾಯ ಇಲ್ಲವೇ?

ಪತಿ: ಇಲ್ಲ. ನಿಮ್ಮ ಆಶೀರ್ವಾದ ಕೆಲಸ ಮಾಡುತ್ತಿದೆ ಎಂದು ಮೊದಲು ತಿಳಿಸಬೇಕು.

★★★

80 ವರ್ಷದ ಮುದುಕನನ್ನು 18 ವರ್ಷದ ತರುಣಿ ಮದುವೆಯಾದಳು. ಮೀಡಿಯಾದವರು ಆ ತರುಣಿಯನ್ನು 'ನೀನು 80 ವರ್ಷದ ಮುದುಕನನ್ನು ಮದುವೆಯಾದದ್ದು ಏಕೆ? ಎಂದು ಕೇಳಿದರು.

ಅವಳು ಕಾವ್ಯಮಯವಾಗಿ 'ಮೊದಲನೆಯದಾಗಿ ಅವನ ಇನ್‌ಕಂ, ಎರಡನೆಯದಾಗಿ ಅವನ ಆಯುಷ್ಯ ಕಮ್? ಎಂದಳು.

**(ಸಂಗ್ರಹ) ಮುರಲೀಧರ ಕುಲಕರ್ಣಿ, ಬೀದರ್**

ಟೀಚರ್: ಸಾವಿತ್ರಿ ತನ್ನ ಪತಿಗಾಗಿ ಯಮನನ್ನೇ ಎದುರಿಸಿ, ಗೆದ್ದಳು. ಈ ಕಥೆಯ ನೀತಿಪಾಠವೇನು?

ಗುಂಡ: ಹೆಂಡತಿಯಿಂದ ಗಂಡನನ್ನು ಬಚಾವ್ ಮಾಡಲು ಆ ಯಮನಿಂದಲೂ ಸಾಧ್ಯವಿಲ್ಲ.

★★★

ಭಿಕ್ಷುಕ: ಒಂದು ಕಪ್ ನೀರು ಕೊಡು ತಾಯಿ.

ಮಹಿಳೆ: ಬರಿ ನೀರ್‍ಯಾಕೆ ಇರು, ಚಿತ್ರಾನ್ನ ಕೊಡ್ತೀನಿ.

ಭಿಕ್ಷುಕ: ಅದನ್ನ ನಿಮ್ಮ ಯಜಮಾನ್ರಿಗೇ ಕೊಡಿ. ವಿಟಮಿನ್ ಮಾತ್ರೆ ನುಂಗೋಕೆ ನೀರು ಕೊಡಿ, ಸಾಕು.

★★★

ಗುಂಡ: ನಮಗಿಂತ ಆನೆಗಳ ಆಯುಷ್ಯ ಹೆಚ್ಚಂತೆ, ಏನು ಕಾರಣ?

ಗೆಳೆಯ: ತೂಕ ಇಳಿಸಿಕೊಳ್ಳೋಕೆ, ನಿನ್ನ ಹಾಗೆ ಅವು ಸರ್ಕಸ್ ಮಾಡಲ್ಲ.

**(ಸಂಗ್ರಹ) ಹಾಡ್ಯ ಬ. ಜಯಾನಂದ ಮೈಸೂರು**

ಮೇಷ್ಟ್ರು: ಕುಣಿಯೋಕೆ ಬರದವನು ನೆಲ ಡೊಂಕು ಅಂದನಂತೆ ಇದಕ್ಕೆ ಉದಾಹರಣೆ ಕೊಡಿ.

ಗುಂಡ: ಮೇಷ್ಟ್ರೇ ನಾ ಹೇಳ್ತೀನಿ

ಮೇಷ್ಟ್ರು: ಹೇಳೋ ಗುಂಡ

ಗುಂಡ: ಗುಂಡಿ ಮುಚ್ಚೋಕೆ ಆಗದವರು 100 ಸಿ.ಸಿ. ಗಾಡಿಯಲ್ಲಿ ಓಡಾಡಿ ಅಂದನಂತೆ.

★★★

ಗುಂಡ ಅಜ್ಜಿಯೊಂದಿಗೆ ಊರಿಗೆ ಹೊರಟಿದ್ದ

ಕಂಡಕ್ಟರ್: ಟಿಕೇಟ್

ಗುಂಡ: ಒಂದು ಅರ್ಧ, ಒಂದು ಪೂರಾ

ಕಂಡಕ್ಟರ್: ಅರ್ಧ ಯಾರಿಗೆ? ಪೂರಾ ಯಾರಿಗೆ?

ಗುಂಡ: ನನಗೆ ಅರ್ಧ, ನಮ್ಮ ಅಜ್ಜಿಗೆ ಪೂರಾ

ಕಂಡಕ್ಟರ್: ಮಗನ, ಚಿಗುರು ಮೀಸೆ ಬಂದಾವ ಅರ್ಧ ಟಿಕೇಟಾ ನಿನಗಾ?

ಗುಂಡ: ಹಂಗಾರ ನಮ್ಮಜ್ಜಿಗೆ ಮೀಸೆ ಬಂದಿಲ್ಲಾ, ಆಕಿಗೆ ಅರ್ಧ, ನನಗೆ ಪೂರಾ ಕೊಡ್ರಿ.

ಗೀತಾ: ನನ್ನ ಮಗ ಪುಟ್ಟ ಮೂರು ತಿಂಗಳಿನಿಂದ ಶಾಲೆಗೆ ಹೋಗುತ್ತಿಲ್ಲ.

ಅನಿತಾ: ಯಾಕೆ ಏನಾಯಿತು?

ಗೀತಾ: ಒಮ್ಮೆ ಆತ ಜಾತ್ರೆಯಲ್ಲಿ ಕಳೆದು ಹೋಗಿದ್ದಾಗ ಅವನ ಅಪ್ಪ ವಾಟ್ಸ್ಯಾಪ್‌ನಲ್ಲಿ ಫೋಟೋ ಸಹಿತ ಸಂದೇಶವೊಂದನ್ನು ಅಪ್‌ಲೋಡ್ ಮಾಡಿದರು. ನಂತರ ಹದಿನೈದು ನಿಮಿಷದಲ್ಲಿ ಪುಟ್ಟ ಸಿಕ್ಕ. ಆದರೆ, ಈಗ ಮೂರು ತಿಂಗಳಿನಿಂದ ಆತ ಎಲ್ಲಿ ಕಾಣಸಿಕ್ಕರೂ ಜನರು ಅವನನ್ನು ಮರಳಿ ಮನೆಗೆ ತಂದು ಬಿಡ್ತಾರೆ. ಏಕೆಂದರೆ, ಆ ಸಂದೇಶ ಇನ್ನೂ ವಾಟ್ಸ್ಯಾಪ್‌ನಲ್ಲಿ ಹರಿದಾಡುತ್ತಲೇ ಇದೆ.

★★★

ದ್ವಾಪರ ಯುಗದಲ್ಲಿ ಕರ್ಣ ಹೇಳಿದ್ದ; ಒಮ್ಮೆ ಬಿಟ್ಟ ಬಾಣ ಇನ್ನೊಮ್ಮೆ ಬಿಡಲಾರೆ.

ಕಲಿಯುಗದಲ್ಲಿ ನೀರೆ ಹೇಳುವಳು ಒಮ್ಮೆ ಉಟ್ಟ ಸೀರೆ ಇನ್ನೊಮ್ಮೆ ಉಡಲಾರೆ ಎಂದು.

**(ಸಂಗ್ರಹ) ಕುಬೇರಪ್ಪ ಎಂ.ವಿಭೂತಿ**